# ಶ್ರೀ ಪ್ರಸನ್ನ ವೆಂಕಟದಾಸರು ಶ್ರೀ ಗುರು ಮಧ್ವರಾಯರನ್ನು ಸ್ತುತಿಸಿ ರಚಿಸಿದ "ಎನ್ನ ಪಾಲಿಸು ಪರಮಕಾಯ" ಕೀರ್ತನೆಯ ಒಳನೋಟ

ಇಲ್ಲಿ ಶ್ರೀ ಪ್ರಸನ್ನ ವೆಂಕಟದಾಸರು ಗುರು ಪರಂಪರೆಗೆ ಅಗ್ರಸ್ಥಾನದಲ್ಲಿದ್ದು ಮಧ್ವಮತಕ್ಕೆ ಮೇಲ್ಪಂಕ್ತಿ ಹಾಕಿದ ಗುರು ಮಧ್ವರಾಯರನ್ನು ಹಲವಾರು ವಿಶೇಷಣಗಳಿಂದ ಭಕ್ತಿ ತುಂಬಿ ಮೂರಾವತಾರದ ಸ್ತುತಿ ಮಾಡಿದ್ದಾರೆ.

**ಎನ್ನ ಪಾಲಿಸು ಪರಮಕಾಯ ರಘು**
**ರನ್ನ ರಾಮನ ಪ್ರಿಯ ಗುರು ಮಧ್ವರಾಯ** ॥ಪ॥

ಎನ್ನುವಲ್ಲಿ ದಾಸರು, ಮಧ್ವಮತಕ್ಕೆ ಮುಕುಟಪ್ರಾಯರೆನಿಸಿದ, ರಘುರಾಮನಿಗೆ ಪ್ರೀತಿಪಾತ್ರನಾದ ಆಂಜನೇಯನನ್ನು ಸ್ತುತಿಸುತ್ತ ಶ್ರೇಷ್ಠವಾದ ಅವತಾರವೆತ್ತಿದಂಥ ಗುರು ಮಧ್ವರಾಯರೇ ನನ್ನನ್ನು ಪಾಲಿಸಿ ಎಂದಿದ್ದಾರೆ.

**ಅಂಜನಿ ಆತ್ಮದಲ್ಲಿ ಬಂದು ರಾಮನ ಪಾದ**
**ಜಂಬವಿಡಿದೆ ಕಡಲ ಲಂಘಿಸಿದೆ ಗೋಷ್ಪದಿ**
**ಪಂಜು ಬೆಳಗಿದೆ ನಿಶಾಚರನ ಪಟ್ಟಣವಳಿದೆ**
**ಕಂಜಾಕ್ಷಿಯಳ ತುಷ್ಟಿಗೈದೆ ಗಡಾ**
**ಸಂಜೀವ ತಂದು ಕಪಿಬಲವ ರಕ್ಷಿಸಿದೆ** ।೧॥

ಎನ್ನುವಲ್ಲಿ ಹನುಮಾವತಾರದ ವರ್ಣಣೆ ಮಾಡುತ್ತಾ ಇಡೀ ರಾಮಾಯಣದ ಅತ್ಯಂತ ಮಹತ್ವಪೂರ್ಣವಾದ ಸಂದರ್ಭಗಳನ್ನು, ಸನ್ನಿವೇಶಗಳನ್ನು ನಮ್ಮ ಮುಂದಿಟ್ಟಿದ್ದಾರೆ. ಅದೆಂದರೆ ಅಂಜನಿ ಪುತ್ರನಾಗಿ ಜನಿಸಿದೆ, ಅತ್ಯಂತ ಭಕ್ತಿಯಿಂದ ಶ್ರೀರಾಮನ ಚರಣಗಳಲ್ಲಿ ಭಕ್ತಿಯಿಟ್ಟು, ರಾಮನ ಸೇವಕನೆನಿಸಿದೆ. ರಾಮನ ಆಜ್ಞೆಯಂತೆ ಸೀತಾಮಾತೆಯನ್ನು ಹುಡುಕುವುದಕ್ಕಾಗಿ ಸಮುದ್ರ ಲಂಘನ ಮಾಡಿ ಲಂಕೆಗೆ ಪ್ರವೇಶ ಮಾಡಿದೆ. ನಿನ್ನ ಬಾಲದಿಂದ ಪಂಜು ಬೆಳಗಿಸಿ, ಲಂಕೆಯನ್ನು ಸುಟ್ಟುಹಾಕಿದೆ. ರಾವಣನ ಪಟ್ಟಣವನ್ನೇ ಹಾಳುಮಾಡಿ, ಸೀತಾಮಾತೆಯನ್ನು ಕಂಡು ಶ್ರೀರಾಮನ ಕುಶಲವನ್ನು ಅರುಹಿದೆ. ರಾಮ–ರಾವಣರ ಯುದ್ಧದಲ್ಲಿ ಕಪಿಬಲವೆಲ್ಲ ಮೂರ್ಛೆ ಹೊಂದಿ ಬಿದ್ದಿರಲು, ಜೊತೆಗೆ ಲಕ್ಷ್ಮಣನೂ ಮೂರ್ಛಾವಸ್ತೆಯಲ್ಲಿರಲು ಸಂಜೀವನವನ್ನೇ ತಂದು ಅವರನ್ನೆಲ್ಲ ರಕ್ಷಿಸಿದೆ ಎಂದು ನಾಲ್ಕು ಸಾಲುಗಳಲ್ಲಿ ಇಡೀ ರಾಮಾಯಣದ ಕಥೆಯನ್ನೇ ವರ್ಣಿಸಿದ್ದಾರೆ ದಾಸರು. ಇದು ಮಧ್ವರಾಯರ ಮೊದಲನೆ ಅವತಾರದ ವರ್ಣನೆಯಾದರೆ ಇನ್ನು ಎರಡನೇ ನುಡಿಯಲ್ಲಿ ಭೀಮಾವತಾರದ ವರ್ಣನೆ ಮಾಡುತ್ತಾಹೋಗಿದ್ದಾರೆ:

**ಕುರುಕುಲಾಧಮನು ಬಲುಸೊಕ್ಕಿ ಸಂಗರ ಭಟರ**
**ನೆರಹಿ ಪಾರ್ಥರ ಬಲವ ಗೆಲುವೆನದವನ ಭರ**
**ಮುಂದೆ ಮಹರಥಿಕರೆದೆ ಹರಿದೆ ಅಸಹಾಯ ಶೂರ**
**ಸರಿಯಾರು ನಿನಗಸಮಧೀರ ಭಾಪು**
**ಕರುಣಾಸಾರ ಉದಾರ ಅಜಪದಧಿಕಾ** ॥೨॥

ಇಲ್ಲಿ ಮಧ್ವಾಚಾರ್ಯರ ಎರಡನೇ ಅವತಾರವಾದ ಭೀಮಾವತಾರದ ವರ್ಣನೆಯನ್ನು ಮಾಡುತ್ತ, ಭೀಮಸೇನ ದೇವರ ಸಾಹಸಮಯವಾದ ಗುಣಗಳನ್ನು ವರ್ಣನೆ ಮಾಡಿದ್ದಾರೆ.

ಸೊಕ್ಕಿನಿಂದ ಮೆರೆಯುತ್ತಿದ್ದ ಕೌರವರಿಗೆ ರಾಜನಾಗಿದ್ದ ದುರ್ಯೋಧನನು ಪಾಂಡವರ ಬಲವನ್ನು ಮುರಿದು ತಾನೇ ಗೆಲುವು ಸಾಧಿಸುತ್ತೇನೆಂದ. ಛಲದಿಂದ ಮೆರೆಯುತ್ತಿದ್ದ ದುರ್ಯೋಧನನ ಸೊಕ್ಕನ್ನು ಮುರಿದು ಅವನ ಸಾಹಸವನ್ನೇ ಅಡಗಿಸಿದೆ. ಮಹಾ–ಮಹಾ ರಥಿಕರ ಬಲವನ್ನು ಮುರಿದು ಅವರ ಸಂಹಾರ ಮಾಡಿದೆ. ನಿನ್ನಂಥ ಅಸಹಾಯಶೂರನು, ಆನೆಯಬಲನು ಯಾರಿದ್ದಾರೆ ಈ ಪ್ರಪಂಚದಲ್ಲಿ ಎಂದು ಭೀಮಸೇನ ದೇವರ ಬಲವನ್ನು ಕೊಂಡಾಡಿ ಜೊತೆಗೆ ಬಲವೊಂದೇ ಅಲ್ಲ ಶರಣು ಬಂದವರಿಗೆ ನಿನ್ನಂತೆ ಕರುಣೆಯಿಂದ ಕಾಪಾಡುವವರು ಯಾರಿಲ್ಲ, ಕರುಣಾಸಾಗರ ನೀನು, ಉದಾರ ಚಿತ್ತನು ನೀನು, ಎಂದು ಸ್ತುತಿಸಿ, "ಆದಿಪದದಧಿಕಾರ" ಎನ್ನುವಲ್ಲಿ ಮುಂದೆ ವಾಯು ದೇವರು ಬ್ರಹ್ಮಪದವಿಯನ್ನು ಅಲಂಕರಿಸಲು ಅಧಿಕಾರವುಳ್ಳವರು, ಬ್ರಹ್ಮಪದವಿಗೇರುವವರು" ಎಂದು ಸೂಚಿಸಿದ್ದಾರೆ.

**ಏಕವಿಂಶತಿ ಮಾಯಿ ರಚಿತ ಭಾಷ್ಯವಜರಿದೆ**
**ಶ್ರೀಶಾಂತನ ನಾಮಾಮೃತವ ಭಕ್ತರಿಗೆರೆದೆ**
**ಭೂಕನಕ ವಧು ವಿಷಯಕಾಂಕ್ಷೆಗಳ ಮೇಲೊದೆದೆ**
**ಲೋಕಕೊಬ್ಬನೆ ಗುರವೆಮೆರೆದೆ ವಿಶ್ವೇಶ ಪ್ರಸನ್ನ**
**ವೆಂಕಟೇಶನಂಘ್ರೀವಿಡಿದೆ** ॥೩॥

ಇಲ್ಲಿ ಮಧ್ವ ಸಿದ್ಧಾಂತದ ನೆಲೆಯನ್ನಿಟ್ಟುಕೊಂಡು ವಾಯು ದೇವರ ಮೂರನೆ ಅವತಾರವಾದ ಗುರು ಮಧ್ವರ ವರ್ಣನೆ ಮಾಡಿದ್ದಾರೆ. ಏನೆಂದರೆ, ಜಗತ್ತು ಎನ್ನುವುದು ಮಾಯೆ ಎನ್ನುವ ಸಿದ್ಧಾಂತವನ್ನಿಟ್ಟುಕೊಂಡು ರಚಿತವಾದ ಇಪ್ಪತ್ತೊಂದು ಮತಗಳನ್ನು ಖಂಡಿಸಿ ಜಗತ್ತು ಸತ್ಯ ಎಂದು ಪರಮಾತ್ಮನ ಸರ್ವವ್ಯಾಪ್ತಿತ್ವವನ್ನು ತೋರುವಂಥ ತತ್ವ–ಸಿದ್ಧಾಂತವನ್ನು ರಚಿಸಿ ಮಾಯೆಯ ಸಿದ್ಧಾಂತವನ್ನು ಜರಿದೆ, ಖಂಡಿಸಿದೆ. ಅಲ್ಲದೆ, ಭಗವಂತ ನಿತ್ಯ–ಸತ್ಯ ಎಂದು ಅವನ ನಾಮಾಮೃತದ ಮಹಿಮೆಯನ್ನು ಜಗತ್ತಿಗೆ, ಅವನ ಭಕ್ತರಿಗೆ ತೋರಿಸಿದೆ. ಜಗತ್ತನ್ನು ಉದ್ಧಾರಮಾಡಬೇಕೆಂದು ಸರ್ವಸ್ವವನ್ನು, ಧನ–ಕನಕ–ಆಸೆ–ಆಕಾಂಕ್ಷೆಗಳನ್ನು ತ್ಯಾಗಮಾಡಿ ಸಂನ್ಯಾಸ ದೀಕ್ಷೆ ಸ್ವೀಕರಿಸಿ ನಿನ್ನಂಥ ಗುರು ಲೋಕಕ್ಕೊಬ್ಬನೆ ಎನ್ನುವುದನ್ನು ತೋರಿಸಿದೆ. ಮಹಾಮಹಿನೆ ವಿಶ್ವಕ್ಕೆ ಒಡೆಯನಾದ ಶ್ರೀಹರಿಯ ಚರಣಗಳನ್ನು ಹಿಡಿದು ಲೋಕಕಲ್ಯಾಣವನ್ನು ಮಾಡವಂಥ ತತ್ವಗಳನ್ನು ಸಾರಿದೆ ಎಂದು ದಾಸರು ಗುರು ಮಧ್ವರನ್ನು ವಿಶೇಷ ಪದಗಳಿಂದ ಸ್ತುತಿಸಿದ್ದಾರೆ.

ಯಾವುದೇ ದಾಸ ಶ್ರೇಷ್ಠರಾಗಲಿ ಆಂಜನೇಯನನ್ನು ಸ್ತುತಿಸಿ ಹಾಡುವಾಗ ಹನುಮ–ಭೀಮ–ಮಧ್ವರ ಅವತಾರಗಳನ್ನು ಉಲ್ಲೇಖಿಸಿಯೇ ಕೀರ್ತನೆಗಳನ್ನು ರಚಿಸಿದ್ದಾರೆ ಅದರಂತೆಯೇ ಗುರು ಮಧ್ವರನ್ನು ಸ್ತುತಿಸುವಾಗ ಈ ಮೂರು ಅವತಾರಗಳ ಉಲ್ಲೇಖವಿದ್ದೇ ಇರುತ್ತದೆ.

– ಶ್ರೀಮತಿ ರೇಖಾ ಕಾಖಂಡಕಿ
ಶ್ರೀ ಪ್ರಸನ್ನ ವೆಂಕಟ ಸಂಶೋಧನಾ ಪ್ರತಿಷ್ಠಾನ ಟ್ರಸ್ಟ್ (ರಿ)
15, ಮಂತ್ರಾಲಯ, ಪ್ರಶಾಂತಿ ನಗರ, 9ನೇ 'ಬಿ' ಮುಖ್ಯ ರಸ್ತೆ,

ಇಸ್ರೋ ಲೇಔಟ್, ಬೆಂಗಳೂರು–560111
ದೂರವಾಣಿ. 080–26665398